18/1

# 2010

## POLITICAL SCIENCE AND INTERNATIONAL RELATIONS

### Paper 1

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

4×5=20

*Answer each question in about 50 words. Each question carries 5 marks.*

**1.** Write short notes on the following :

(a) Plato's Philosopher King

(b) Bentham's principle of Utility

(c) Michel's Iron Law of Oligarchy

(d) Concept of Scheduled Caste

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** ಈ ಕೆಳಗಿನವುಗಳಿಗೆ ಕಿರುಟಿಪ್ಪಣಿ ಬರೆಯಿರಿ :

(ಎ) ಪ್ಲೇಟೊ ಹೇಳಿದ ದಾರ್ಶನಿಕ ರಾಜ

(ಬಿ) ಬೆಂಥಮ್‌ನ ಪ್ರಯೋಜನದ ತತ್ವ

(ಸಿ) ಮೈಖೇಲ್ ಹೇಳಿದ ಸ್ವಲ್ಪಜನಾಧಿಪತ್ಯ (ಆಲಿಗಾರ್ಕಿ) ದ ಉಕ್ಕಿನ ನಿಯಮ

(ಡಿ) ಪರಿಶಿಷ್ಟ ಜಾತಿಯ ಪರಿಕಲ್ಪನೆ

## PART B

*10×10=100*

*Answer each question in about 100 words. Each question carries 10 marks.*

**2.** Give a brief account of Marsilius's distinction between Divine Law and Civil Law.

**3.** Distinguish Behaviouralism from Post-Behaviouralism.

**4.** Highlight the difference between Power and Authority.

**5.** What are the differences between a Fascist and Marxist idea of State ?

**6.** Outline the traditional approaches to the study of Comparative Politics.

**7.** Give a brief account of Lenin's conception of the Revolutionary Party of the Proletariat.

**8.** State Jinnah's arguments in defence of his 'Two-Nation' theory.

**9.** Distinguish between Symmetric and Asymmetric Federalism. Illustrate your answer.

**10.** What are the major differences between the Lok Sabha and the Rajya Sabha ?

**11.** Outline Weber's views on Bureaucracy.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ದೈವ ನಿಯಮ ಮತ್ತು ಪೌರ ನಿಯಮಗಳ ನಡುವೆ ಮಾರ್ಸಿಲಿಯಸ್ ಹೇಗೆ ಭೇದ ಕಲ್ಪಿಸುತ್ತಾನೆ ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಸಿ.

**3.** ವರ್ತನಾತ್ಮಕವಾದ ಮತ್ತು ವರ್ತನಾತ್ಮಕೋತ್ತರವಾದಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ.

**4.** ಅಧಿಕಾರ ಮತ್ತು ಪ್ರಭುತ್ವಗಳಿಗಿರುವ ಮುಖ್ಯ ವ್ಯತ್ಯಾಸಗಳನ್ನು ತಿಳಿಸಿ.

**5.** ರಾಜ್ಯವನ್ನು ಕುರಿತಂತೆ ಫ್ಯಾಸಿಸ್ಟ್ ಮತ್ತು ಮಾರ್ಕ್ಸಿಸ್ಟ್ ಕಲ್ಪನೆಗಳಲ್ಲಿರುವ ವ್ಯತ್ಯಾಸಗಳೇನು ?

**6.** ತೌಲನಿಕ ರಾಜಕೀಯ ಅಧ್ಯಯನ ಕುರಿತ ಸಾಂಪ್ರದಾಯಿಕ ವಿಧಾನಗಳ ರೂಪುರೇಷೆಯನ್ನು ತಿಳಿಸಿ.

**7.** ಶ್ರಮ ಜೀವಿ ವರ್ಗದ ಕ್ರಾಂತಿಕಾರಿ ಪಕ್ಷವನ್ನು ಕುರಿತಂತೆ ಲೆನಿನ್‌ರ ಪರಿಕಲ್ಪನೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಿ.

**8.** ತಮ್ಮ 'ಎರಡು ರಾಷ್ಟ್ರಗಳ' ಸಿದ್ಧಾಂತದ ಸಮರ್ಥನೆಗೆ ಜಿನ್ನಾರವರು ಮಂಡಿಸಿದ ವಾದಗಳೇನು ?

**9.** ಸಮಮಿತೀಯ ಮತ್ತು ಅಸಮಮಿತೀಯ ಫೆಡರಲಿಸಂಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ. ಉದಾಹರಣೆಗಳೊಂದಿಗೆ ನಿಮ್ಮ ಉತ್ತರವನ್ನು ಬರೆಯಿರಿ.

**10.** ಲೋಕಸಭೆ ಮತ್ತು ರಾಜ್ಯಸಭೆಗಳ ನಡುವಿನ ಪ್ರಮುಖ ವ್ಯತ್ಯಾಸಗಳೇನು ?

**11.** ಅಧಿಕಾರಶಾಹಿಯನ್ನು ಕುರಿತಂತೆ ವೆಬರ್‌ನ ದೃಷ್ಟಿಕೋನವನ್ನು ನಿರೂಪಿಸಿ.

## PART C

*6×15=90*

*Answer each question in about 150 words. Each question carries 15 marks.*

**12.** Examine Mao's idea on New Democracy.

**13.** Discuss the idea of Kingship in Ancient India.

**14.** Highlight the important arguments for the adoption of Representative Democracy rather than Direct Democracy in modern political systems.

**15.** Critically discuss the reasons for the defeat of Socialism in Soviet Union and Eastern Europe.

**16.** Taking Sri Lanka as an example, critically assess the role and place of ethnicity in shaping the political process in South Asia.

**17.** Highlight the Constitutional and Political reasons for the repeated outburst of political unrest in Jammu and Kashmir.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ನವ ಪ್ರಜಾಪ್ರಭುತ್ವ ಕುರಿತಂತೆ ಮಾವೋರ ವಿಚಾರಗಳನ್ನು ಪರಿಶೀಲಿಸಿ.

**13.** ಪ್ರಾಚೀನ ಭಾರತದಲ್ಲಿದ್ದ ರಾಜಪ್ರಭುತ್ವದ ವಿಚಾರ ಕುರಿತು ಚರ್ಚಿಸಿ.

**14.** ಆಧುನಿಕ ರಾಜಕೀಯ ವ್ಯವಸ್ಥೆಗಳಲ್ಲಿ ನೇರ ಪ್ರಜಾಪ್ರಭುತ್ವಕ್ಕೆ ಬದಲಾಗಿ ಪ್ರಾತಿನಿಧ್ಯ ಪ್ರಜಾಪ್ರಭುತ್ವವನ್ನು ಅಂಗೀಕರಿಸುವುದಕ್ಕೆ ಯಾವ ವಾದಗಳನ್ನು ಮುಖ್ಯವಾಗಿ ಮಂಡಿಸಲಾಗುತ್ತಿದೆ ? ತಿಳಿಸಿ.

**15.** ಸೋವಿಯತ್ ಒಕ್ಕೂಟ ಹಾಗೂ ಪೌರ್ವಾತ್ಯ ಯುರೋಪಿನಲ್ಲಿ ಸಮಾಜವಾದದ ವಿಫಲತೆಗೆ ಕಾರಣವಾದ ಅಂಶಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಿ.

**16.** ಶ್ರೀಲಂಕಾವನ್ನು ಉದಾಹರಣೆಯಾಗಿಟ್ಟುಕೊಂಡು, ದಕ್ಷಿಣ ಏಷಿಯಾದ ರಾಜಕೀಯ ಪ್ರಕ್ರಿಯೆಯನ್ನು ರೂಪಿಸುವಲ್ಲಿ ಜನಾಂಗೀಯತಾ ಅಂಶಗಳ ಪಾತ್ರ ಹಾಗೂ ಸ್ಥಾನವನ್ನು ವಿಮರ್ಶಾತ್ಮಕವಾಗಿ ನಿರೂಪಿಸಿ.

**17.** ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜಕೀಯ ಅಶಾಂತಿಯು ಪದೇ ಪದೇ ಭುಗಿಲೇಳುವುದಕ್ಕೆ ಮುಖ್ಯವಾದ ಸಾಂವಿಧಾನಿಕ ಹಾಗೂ ರಾಜಕೀಯ ಕಾರಣಗಳೇನು ಎಂಬುದನ್ನು ವಿವರಿಸಿ.

[Turn over

## PART D

*3×30=90*

*Answer any **three** of the following questions, each in about 300 words. Each question carries 30 marks.*

**18.** Discuss the nature of the Modern State. Are there signs of its decline ? Give reasons for your answer.

**19.** A right-based conception of Justice has been criticised by Communitarians and Feminists. Explore the reasons for this criticism.

**20.** Critically discuss the issues of agreement and conflict between Gandhi and Ambedkar and outline their consequences.

**21.** Examine the electoral systems prevalent in the world. What are some of the principal limitations of the First Past the Post System ?

**22.** Discuss the opportunities and challenges faced by the Panchayati Raj Institution in India under the existing provisions. Illustrate your answer with reference to any one of the states in India.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಆಧುನಿಕ ರಾಜ್ಯದ ಸ್ವರೂಪವನ್ನು ಕುರಿತು ಚರ್ಚಿಸಿ. ಇದು ಅವನತಿ ಹೊಂದುವ ಸೂಚನೆಗಳಿವೆಯೆ ? ನಿಮ್ಮ ಉತ್ತರಕ್ಕೆ ಕಾರಣಗಳನ್ನು ಕೊಡಿ.

**19.** ಬಲಪಂಥೀಯ ಆಧಾರಿತ ನ್ಯಾಯ ವ್ಯವಸ್ಥೆಯ ಪರಿಕಲ್ಪನೆಯನ್ನು ಕಮ್ಯುನಿಟೇರಿಯನ್‌ಗಳು ಮತ್ತು ಸ್ತ್ರೀವಾದಿಗಳು ಟೀಕಿಸುತ್ತಿದ್ದಾರೆ. ಈ ಟೀಕೆಗೆ ಕಾರಣಗಳೇನು ಎಂಬುದನ್ನು ಗುರುತಿಸಿ.

**20.** ಗಾಂಧಿ ಮತ್ತು ಅಂಬೇಡ್ಕರ್‌ರ ನಡುವೆ ಸಹಮತವಿದ್ದ ಹಾಗೂ ಭಿನ್ನಾಭಿಪ್ರಾಯವಿದ್ದ ಅಂಶಗಳನ್ನು ಕುರಿತು ವಿಮರ್ಶಾತ್ಮಕವಾಗಿ ಚರ್ಚಿಸಿ, ಹಾಗೂ ಇವುಗಳಿಂದಾದ ಪರಿಣಾಮಗಳನ್ನು ನಿರೂಪಿಸಿ.

**21.** ಜಗತ್ತಿನಲ್ಲಿ ಪ್ರಚಲಿತವಿರುವ ಚುನಾವಣಾ ವ್ಯವಸ್ಥೆಗಳನ್ನು ಪರಿಶೀಲಿಸಿ. First Past the Post System ನ ಕೆಲವು ಮುಖ್ಯ ಮಿತಿಗಳೇನು ?

**22.** ಈಗಿರುವ ಉಪಬಂಧಗಳ ಅಡಿಯಲ್ಲಿ ಭಾರತದ ಪಂಚಾಯತ್‌ರಾಜ್ ವ್ಯವಸ್ಥೆಗೆ ಇರುವ ಅವಕಾಶಗಳೇನು ಹಾಗೂ ಸವಾಲುಗಳೇನು ? ಭಾರತದ ಯಾವುದಾದರೊಂದು ರಾಜ್ಯವನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಉತ್ತರವನ್ನು ಬರೆಯಿರಿ.

# 2010

# ರಾಜಕೀಯ ವಿಜ್ಞಾನ ಮತ್ತು ಅಂತರರಾಷ್ಟ್ರೀಯ ಸಂಬಂಧಗಳು

## ಪ್ರಶ್ನೆಪತ್ರಿಕೆ 1

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

---

### ಸೂಚನೆಗಳು

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.*

*ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :*

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

*ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.*

*ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು **ಕಡ್ಡಾಯವಾಗಿ** ಉತ್ತರಿಸಿ.*
*ಭಾಗ D ಯಲ್ಲಿಯ ಯಾವುದಾದರೂ **ಮೂರು** ಪ್ರಶ್ನೆಗಳನ್ನು ಉತ್ತರಿಸಿ.*

SEAL

---

***Note :*** *The English version of the instructions is printed on the front cover of this question paper.*

# 2010

## POLITICAL SCIENCE AND INTERNATIONAL RELATIONS

### Paper 2

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

**1.** Write short notes on the following :

(a) Treaty of Westphalia

(b) McMahon Line

(c) Mutual Assured Destruction (M.A.D.)

(d) Al-Fatah

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** ಈ ಕೆಳಗಿನವುಗಳಿಗೆ ಕಿರು ಟಿಪ್ಪಣಿ ಬರೆಯಿರಿ :

(ಎ) ವೆಸ್ಟ್‌ಫೇಲಿಯಾ ಒಡಂಬಡಿಕೆ

(ಬಿ) ಮೆಕ್‌ಮೋಹನ್ ರೇಖೆ

(ಸಿ) Mutual Assured Destruction (M.A.D.)

(ಡಿ) ಅಲ್-ಫತಾಹ್

## PART B

*10×10=100*

*Answer each question in about 100 words. Each question carries 10 marks.*

**2.** Bring out the different nuances of the concept of Balance of Power.

**3.** What is a Unit Veto System ?

**4.** Specify the difference between Non-Alignment and Neutrality.

**5.** What were the issues of contention on Environment at the Copenhagen Summit ?

**6.** Highlight the provisions of the UN talks on Anti-discrimination.

**7.** Give an account of the principal functions of UNDP.

**8.** Outline the structure and mandate of IAEA.

**9.** Why has India not signed the NPT still ?

**10.** What do you understand by Summit Diplomacy ?

**11.** Who are the Taliban ?

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಶಕ್ತಿ ಸಮತೋಲನ ಪರಿಕಲ್ಪನೆಯ ವಿವಿಧ ಸೂಕ್ಷ್ಮ ವ್ಯತ್ಯಾಸಗಳನ್ನು ನಿರೂಪಿಸಿ.

**3.** ಯೂನಿಟ್ ವೀಟೊ ವ್ಯವಸ್ಥೆ ಎಂದರೇನು ?

**4.** ಅಲಿಪ್ತತೆ ಮತ್ತು ತಾಟಸ್ಥ್ಯ, ಇವುಗಳ ನಡುವಿನ ವ್ಯತ್ಯಾಸಗಳನ್ನು ಸ್ಪಷ್ಟಪಡಿಸಿ.

**5.** ಕೋಪನ್‌ಹೇಗನ್ ಶೃಂಗ ಸಭೆಯಲ್ಲಿ ವಾತಾವರಣ ಕುರಿತಂತೆ ವಾದವಿವಾದಕ್ಕೆ ಎಡೆಮಾಡಿಕೊಟ್ಟ ವಿಷಯಗಳು ಯಾವುವು ?

**6.** ತಾರತಮ್ಯ ವಿರೋಧ ಕುರಿತಂತೆ ವಿಶ್ವ ಸಂಸ್ಥೆಯ ಮಾತುಕಥೆಗಳ ಮುಖ್ಯ ಉಪಬಂಧಗಳನ್ನು ತಿಳಿಸಿ.

**7.** UNDP ಯ ಮುಖ್ಯ ಕಾರ್ಯಗಳನ್ನು ನಿರೂಪಿಸಿ.

**8.** IAEA ಯ ರಚನೆ ಹಾಗೂ ಜನಾದೇಶ ನಿರೂಪಿಸಿ.

**9.** ಭಾರತವು ಇನ್ನೂ ಯಾಕೆ NPT ಗೆ ಸಹಿ ಹಾಕಿಲ್ಲ ?

**10.** ಶೃಂಗ ಸಭೆಯ ರಾಜತಾಂತ್ರಿಕತೆ ಎಂಬುದನ್ನು ಹೇಗೆ ಅರ್ಥೈಸುತ್ತೀರಿ ?

**11.** ತಾಲಿಬಾನ್ ಎಂದರೆ ಯಾರು ?

## PART C

$6 \times 15 = 90$

*Answer each question in about 150 words. Each question carries 15 marks.*

**12.** Review the relation between National Interest and National Power.

**13.** Discuss the process that led to the dismantling of the apartheid regime in South Africa.

**14.** Give a critical account of the strategy employed by Maoists in Nepal for the overthrow of monarchy and their own accession to power.

**15.** Give an account of the growing inroads of China in Africa in recent years and outline its consequences for Indian Foreign Policy.

**16.** Does India have a policy towards the Indian Ocean Region ? Illustrate your answer.

**17.** Critically assess the strengths and weaknesses of the international regime on Human Rights.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ರಾಷ್ಟ್ರೀಯ ಹಿತಾಸಕ್ತಿ ಮತ್ತು ರಾಷ್ಟ್ರೀಯ ಅಧಿಕಾರ ಇವೆರಡರ ನಡುವಿನ ಸಂಬಂಧ ಕುರಿತು ಅವಲೋಕಿಸಿ.

**13.** ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ಆಳ್ವಿಕೆಯು ಕಳಚಿ ಬೀಳುವುದಕ್ಕೆ ಎಡೆಮಾಡಿಕೊಟ್ಟ ಪ್ರಕ್ರಿಯೆ ಕುರಿತು ಚರ್ಚಿಸಿ.

**14.** ನೇಪಾಳದಲ್ಲಿ, ರಾಜಪ್ರಭುತ್ವವನ್ನು ಕೆಳಗುರುಳಿಸಲು ಮತ್ತು ಸ್ವತಃ ತಾವೇ ಅಧಿಕಾರದ ಗದ್ದುಗೆ ಏರಲು ಮಾವೋವಾದಿಗಳು ಅಳವಡಿಸಿಕೊಂಡ ತಂತ್ರೋಪಾಯವನ್ನು ಕುರಿತು ವಿಮರ್ಶಾತ್ಮಕವಾಗಿ ನಿರೂಪಿಸಿ.

**15.** ಇತ್ತೀಚಿನ ವರ್ಷಗಳಲ್ಲಿ ಅಫ್ರಿಕಾದೊಳಗೆ ಚೀನಾದ ಅತಿಕ್ರಮಣಗಳು ಹೆಚ್ಚಾಗುತ್ತಿರುವುದನ್ನು ವಿವರಿಸಿ ಮತ್ತು ಭಾರತದ ವಿದೇಶಾಂಗ ನೀತಿಯ ಮೇಲೆ ಇದು ಏನು ಪರಿಣಾಮ ಬೀರಲಿದೆ ಎಂಬುದನ್ನು ತಿಳಿಸಿ.

**16.** ಹಿಂದೂ ಮಹಾಸಾಗರ ಪ್ರದೇಶದ ಮೇಲೆ ಭಾರತವು ತನ್ನ ಕಾರ್ಯ ನೀತಿಯನ್ನು ಹೊಂದಿದೆಯೆ ? ನಿಮ್ಮ ಉತ್ತರವನ್ನು ಉದಾಹರಣೆಗಳೊಂದಿಗೆ ಸ್ಪಷ್ಟ ಪಡಿಸಿ.

**17.** ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ವ್ಯವಸ್ಥೆಯ ಶಕ್ತಿ ಹಾಗೂ ದೌರ್ಬಲ್ಯಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

## PART D

*3×30=90*

*Answer any **three** of the following questions, each in about 300 words. Each question carries 30 marks.*

**18.** Trace the process of de-colonisation of Africa and highlight issues on inter-state disputes confronting its new States.

**19.** Bring out the convergence and conflict of interests between India and U.S.A. in the Gulf region.

**20.** Review the success of the attempts towards nuclear disarmament so far. Does the attempt of new countries to go nuclear forestall this purpose ?

**21.** Review Indo-Pak relations in the post-Musharraf years. What are the plausible ways to provide a positive turn to this relation ?

**22.** Review the working of European Union as a regional organisation and delineate its strengths and weaknesses.

## ಭಾಗ D

*3×30=90*

*ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಆಫ್ರಿಕಾದಲ್ಲಿ ನಿರ್ವಸಾಹತೀಕರಣ ನಡೆದು ಬಂದ ಪ್ರಕ್ರಿಯೆಯನ್ನು ಗುರುತಿಸಿ ಮತ್ತು ಅದರ ಹೊಸ ರಾಜ್ಯಗಳು ಎದುರಿಸುತ್ತಿರುವ ಅಂತರ-ರಾಜ್ಯ ವಿವಾದಗಳ ಮುಖ್ಯಾಂಶಗಳನ್ನು ವಿವರಿಸಿ.

**19.** ಕೊಲ್ಲಿ ಪ್ರದೇಶದಲ್ಲಿ ಭಾರತ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನದ ನಡುವೆ ಯಾವ ಅಂಶಗಳ ಬಗ್ಗೆ ಒಮ್ಮತವಿದೆ ಮತ್ತು ಯಾವ ಅಂಶಗಳ ಬಗ್ಗೆ ಘರ್ಷಣೆ ಇದೆ ಎಂಬುದನ್ನು ನಿರೂಪಿಸಿ.

**20.** ಅಣ್ವಸ್ತ್ರ ನಿಶ್ಶಸ್ತ್ರೀಕರಣದ ವಿಷಯದಲ್ಲಿ ಇದುವರೆಗೆ ನಡೆದಿರುವ ಪ್ರಯತ್ನಗಳ ಯಶಸ್ಸಿನ ಪುನರಾವಲೋಕನ ಮಾಡಿ. ಹೊಸ ದೇಶಗಳು ಅಣ್ವಸ್ತ್ರ ಹೊಂದುವ ಪ್ರಯತ್ನ ಮಾಡುತ್ತಿರುವುದರಿಂದ ಈ ಉದ್ದೇಶಕ್ಕೆ ಅಡ್ಡಿಯಾಗಲಿದೆಯೆ ?

**21.** ಮುಶರಫ್ ನಂತರದ ವರ್ಷಗಳಲ್ಲಿ ಭಾರತ-ಪಾಕ್ ಸಂಬಂಧಗಳು ಹೇಗಿವೆ ಎಂಬುದರ ಪುನರಾವಲೋಕನ ಮಾಡಿ. ಈ ಸಂಬಂಧಕ್ಕೆ ಒಂದು ಇತ್ಯಾತ್ಮಕ ತಿರುವು ತಂದುಕೊಡಬಲ್ಲ ಸಂಭವನೀಯ ಮಾರ್ಗಗಳು ಯಾವುವು ?

**22.** ಒಂದು ಪ್ರಾದೇಶಿಕ ಸಂಘಟನೆಯಾಗಿ ಐರೋಪ್ಯ ಒಕ್ಕೂಟದ ಕಾರ್ಯ ನಿರ್ವಹಣೆಯನ್ನು ಪರಿಶೀಲಿಸಿ ಮತ್ತು ಅದರ ಶಕ್ತಿ ಹಾಗೂ ದೌರ್ಬಲ್ಯಗಳನ್ನು ನಿರೂಪಿಸಿ.

18/2

# 2010

## ರಾಜಕೀಯ ವಿಜ್ಞಾನ ಮತ್ತು ಅಂತರರಾಷ್ಟ್ರೀಯ ಸಂಬಂಧಗಳು

### ಪ್ರಶ್ನೆಪತ್ರಿಕೆ 2

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

---

**ಸೂಚನೆಗಳು**

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.*

*ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :*

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

*ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.*

*ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.*
*ಭಾಗ D ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.*

---

***Note :*** *The English version of the instructions is printed on the front cover of this question paper.*

SEAL